ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 12/12/2019

ಹೊಸ ವರ್ಷದಿಂದಲೇ ಜಿಲ್ಲಾ, ತಾಲೂಕು ಕಚೇರಿಯಲ್ಲಿ ಜಾರಿ | ಆಡಳಿತದಲ್ಲಿ ವೇಗ ತರಲು ಈ ನಿರ್ಧಾರ


# ಮಹಿಳಾ, ಮಕ್ಕಳ ಇಲಾಖೆ ಪೇಪರ್ ಮುಕ್ತ!

12/12/19

• ಮಂಜುನಾಥ ಗಂಗಾವತಿ

ಬೆಂಗಳೂರು: ಪಾರದರ್ಶಕತೆ ಹಾಗೂ ಯೋಜನೆಗಳಿಗೆ ವೇಗ ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇ- ಆಡಳಿತ ಜಾರಿಗೊಳಿಸಲು ಮುಂದಾಗಿದ್ದು, ಜನವರಿ 2020ರಿಂದಲೇ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕಚೇರಿಗಳು ಪೇಪರ್ ಮುಕ್ತವಾಗಲಿವೆ.

ಭಾಗ್ಯಲಕ್ಷ್ಮಿ, ಕ್ಷೀರಭಾಗ್ಯ, ಅಂಗನವಾಡಿ, ಸಖಿ, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ, ಉಜ್ವಲ, ಬೇಟಿ ಬಚಾವೊ ಬೇಟಿ ಪಡಾವೋ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಹಲವಾರು ಯೋಜನೆಗಳಿದ್ದು, ಆಡಳಿತ ಯಂತ್ರಕ್ಕೆ ವೇಗ ನೀಡಲು ಇಲಾಖೆ ಸಂಪೂರ್ಣ ಇ ಆಡಳಿತಕ್ಕೆ ಒತ್ತು ನೀಡಿದೆ. ಈಗಾಗಲೇ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಜಾರಿಯಾಗಿದ್ದು, ಜನವರಿ ವೇಳೆಗೆ ಜಿಲ್ಲಾ ಮಟ್ಟದ ಎಲ್ಲಾ ಕಚೇರಿಯಲ್ಲಿ ಆರಂಭವಾಗಲಿದೆ.



## ವಿಳಂಬ ನೀತಿಗೆ ಬ್ರೇಕ್

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ತಾಲೂಕು ಮತ್ತು ಜಿಲ್ಲಾ ಮಟ್ಟದ ಕಚೇರಿಯಿಂದ ಫೈಲುಗಳು ಕೇಂದ್ರ ಕಚೇರಿಗೆ ಬಂದಿರುವುದು ಯಾವ ದಿನಾಂಕ, ಯಾವ ಸಮಯ ಎಂಬುದನ್ನು ತಿಳಿಯಬಹುದು. ಯಾವ ಫೈಲು ವಿಲೇವಾರಿಗೆ ಬಾಕಿ ಇದೆ. ಯಾವ ಯೋಜನೆಗೆ ಎಷ್ಟು ಹಣ, ಯಾವ ತಾಲೂಕಿನಲ್ಲಿ ಎಷ್ಟು ಅಂಗನವಾಡಿ ಕಾರ್ಯಕರ್ತರು, ತರಬೇತಿ, ವೇತನ, ಮಕ್ಕಳ ಸಂಖ್ಯೆ ಹೀಗೆ ಹಲವಾರು ವಿಷಯ ಕುರಿತ ಸ್ಥಳದಲ್ಲಿಯೇ ಪಡೆಯಬಹುದು.

**ಇಲಾಖೆಯಲ್ಲಿ ಇರುವ ಅನುದಾನದಲ್ಲಿಯೇ ಇ ಆಡಳಿತ ಅಳವಡಿಸಲಾಗುತ್ತಿದೆ. ಇದರಿಂದ ಪೇಪರ್ ಮುಕ್ತವಾಗಲಿದ್ದು, ಸಂಪೂರ್ಣ ಡಿಜಿಟಲೀಕರಣವಾಗಲಿದೆ.**

**• ಕೆ.ದಯಾನಂದ, ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕ**

ಕಡತಗಳು ಕಳೆದು ಹೋಗುವುದು, ಯೋಜನೆ ನನೆಗುದಿ, ನಾಗರಿಕ ಕೇಂದ್ರಿತ ಸೇವೆಗಳು ಮತ್ತು ಮಾಹಿತಿ ಪೂರೈಕೆ ಸೇವೆಗಳಲ್ಲಿ ವಿಳಂಬ ಧೋರಣೆ ತಪ್ಪಿಸಲು ಇದು ಅನುಕೂಲವಾಗಲಿದೆ. ನವದೆಹಲಿಯ ಎನ್ಐಸಿ (ನ್ಯಾಷನಲ್ ಇನ್ಫೋರ್ಮಾಟಿಕ್ಸ್ ಸೆಂಟರ್)ಯಿಂದ ಅಭಿವೃದ್ಧಿ ಪಡಿಸಿದ್ದ ತಂತ್ರಾಂಶ ಮೂಲಕ ಇಲಾಖೆಯ ಎಲ್ಲಾ ಮಾಹಿತಿ ಕ್ಷಣಾರ್ಧದಲ್ಲಿ ದೊರೆಯಲಿದ್ದು, ಕೆಲಸದಲ್ಲಿ ಸುಧಾರಣೆ ತರಲು ಸಾಧ್ಯವಾಗಲಿದೆ.

ರಾಜ್ಯದ ಎಲ್ಲಾ 225 ತಾಲೂಕುಗಳಲ್ಲಿ ಒಟ್ಟು 62,580 ಅಂಗನವಾಡಿ ಕೇಂದ್ರಗಳು ಹಾಗೂ 3,331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಆಡಳಿತ ವೆಚ್ಚದಡಿ ಅಂಗನವಾಡಿ ಕೇಂದ್ರಕ್ಕೆ ಮೆಡಿಸಿನ್ ಕಿಟ್‌ಗಳ ವಿತರಣೆ, ಪೂರಕ ಪೌಷ್ಟಿಕ ಆಹಾರ, ಶಾಲಾ ಪೂರ್ವ ಶಿಕ್ಷಣ, ಸೃಷ್ಟಿ ಬಾಲಸ್ನೇಹಿ, ಮಾತೃ ಪೂರ್ಣ, ಅಂಗನವಾಡಿ ಕಟ್ಟಡಗಳು, ಕಿಶೋರಿ ಶಕ್ತಿ, ರಾಷ್ಟ್ರೀಯ ಶಿಶು ಪಾಲನಾ ಯೋಜನೆಗಳು, ಜೆಜೆ ಕಾಯ್ದೆ, ಪೋಕ್ಸೋ, ಮಕ್ಕಳ ಸ್ನೇಹಿ ನ್ಯಾಯಾಲಯ, ಬಾಲ ಮಂದಿರಗಳು, ತೆರೆದ ತಂಗುದಾಣ, ಎಚ್.ಐ.ವಿ. ಪೀಡಿತರಿಗೆ ಸೇವೆಗಳು, ಸ್ವಯಂ ಸೇವಾ ಸಂಸ್ಥೆಗಳ ನೋಂದಣಿ, ಸಾಂತ್ವನ, ನಿಲಯಗಳು, ಗೆಳತಿ, ಸ್ಥೈರ್ಯ ಯೋಜನೆಗಳ ಸ್ಥಿತಿಗತಿ ತಿಳಿಯಲು ಸಹಕಾರಿಯಾಗಲಿದೆ.

ಇದು ಮುಂದುವರಿದ ತಂತ್ರಜ್ಞಾನವಾಗಿದ್ದು, ಈಗಾಗಲೇ ಪ್ರತಿ ಜಿಲ್ಲಾ ಮತ್ತು ತಾಲೂಕಿನಲ್ಲಿ ಪ್ರತಿಯೊಂದು ಫೈಲ್‌ಗಳನ್ನು ಅಪ್ಲೋಡ್ ಮಾಡಲಾಗುತ್ತಿದೆ. ಇದರಿಂದ ಪ್ರತಿ ತಾಲೂಕಿನ ಮಾಹಿತಿ ಜಿಲ್ಲಾ ಕಚೇರಿಯಲ್ಲಿ ದೊರೆಯಲಿದ್ದು, ರಾಜ್ಯದ ಮಾಹಿತಿ ಕೇಂದ್ರ ಕಚೇರಿಯಲ್ಲಿ ಲಭ್ಯವಾಗಲಿದೆ.